**ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.**

**ಅಪರಾಧ ಪ್ರಕರಣ ಸಂಖ್ಯೆ: 665/2019**

| | | |
|---|---|---|
| **ಸಾಕ್ಷಿಯ ಹೆಸರು** | ರಂಗಸ್ವಾಮಿ | ಚಾಸಾ-3 |
| **ತಂದೆಯ ಹೆಸರು** | ಈರಯ್ಯ | |
| **ಉದ್ಯೋಗ** | ಖಾಸಗಿ ಕೆಲಸ | ಪ್ರಾಸಾ-2 |
| **ವಾಸ ಸ್ಥಳ** | ಮುತ್ತಿಗೆ | |
| **ದಿನಾಂಕ: 20.06.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆ:** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

ಚಾಸಾ 1 ನನ್ನ ತಾಯಿ. ಆರೋಪಿಗಳು ನಮ್ಮ ಊರಿನವರು ನಾನು ನೋಡಿರುತ್ತೇನೆ. ದಿ: 18.05.18 ರಂದು ಸುಮಾರು ಮ.12-45 ರ ಕಾಲಕ್ಕೆ ಚಾಸಾ 2 ರವರು ಕರೆ ಮಾಡಿ ಚಾಸಾ 1 ರವರಿಗೆ ನಿಮ್ಮ ತಾಯಿಗೆ ಆರೋಪಿತರು ನಿಮ್ಮ ಜಮೀನಿನಲ್ಲಿ ಹೊಡೆದಿದ್ದು ಅವರ ಎರಡು ಹಲ್ಲುಗಳು ಮುರಿದಿರುತ್ತದೆ , ಮೈ ಕೈ ಮುಟ್ಟಿ ಹೊಡೆದಿರುತ್ತಾರೆ ಮತ್ತು ಕುತ್ತಿಗೆ ಹಿಸುಕಿ ಬಟ್ಟೆ ಹಿಡಿದು ಎಳೆದಾಡಿ ಚಾಸಾ 1 ರವರ ಮಾನಕ್ಕೆ ಹಾನಿ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ನನಗೆ ಮಾಹಿತಿ ಬಂದ ಕೂಡಲೇ ನನ್ನ ಮೇಲಾದಿಕಾರಿಗಳಿಗೆ ವಿಷಯ ತಿಳಿಸಿ ಅಲ್ಲಿಂದ ಹೊರಟೆನು ಅಷ್ಟರಲ್ಲಿ ಚಾಸಾ 2 ರವರು ಚಾಸಾ 1 ರವರನ್ನು ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದು ನಾನು ಚಾಸಾ 1 ರವರನ್ನು ನೋಡಿದಾಗ ಅವರ ಎರಡು ಹಲ್ಲು ಮುರಿದಿತ್ತು ಕುತ್ತಿಗೆಗೆ ಮೈ ಕೈಗೆ ಪೆಟ್ಟಾಗಿತ್ತು. ಅಲ್ಲಿನ ವೈದ್ಯರು ಚಾಸಾ 1 ರವರನ್ನು ಪರೀಕ್ಷಿಸಿದ್ದು ಹೆಚ್ಚಿನ ಚಿಕಿತ್ಸೆಗೆ ಹಾಸನದ ಸರ್ಕಾರಿ ಆಸ್ಪತ್ರೆಗೆ ಸೂಚಿಸಿದ್ದು ಅಂಬುಲೆನ್ಸ ನಲ್ಲಿ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲಿಸಿರುತ್ತೇವೆ. ಜಗಳವಾದ ಜಾಗವನ್ನು ಅಂದರೆ 0.19 ಗುಂಟೆಯನ್ನು ನಾವು 1ನೇ ಆರೋಪಿ ಅಣ್ಣಯ್ಯ ಮತ್ತು ಅತನ ಸಹೋದರ ಬೊಮ್ಮಯ್ಯ ರವರಿಂದ ಖರೀದಿ ಮಾಡಿದ ಜಾಗ. ಆದರೂ 1ನೇ ಆರೋಪಿ ಖಾತೆಯನ್ನು ಅವರ ಹೆಸರಿಗೆ ಮಾಡಿಸಿಕೊಂಡಿದ್ದು 1ನೇ ಆರೋಪಿ ಆ ಜಾಗವನ್ನು ಉಳುಮೆ ಮಾಡುತ್ತಿದ್ದಾಗ ನನ್ನ ತಾಯಿ ಪ್ರಶ್ನಿಸಿದ್ದು ಆಗ ಈ ಜಗಳ ಆಗಿರುತ್ತದೆ. ಚಾಸಾ 1 ರವರನ್ನು ಈ ಘಟನೆ ಬಗ್ಗೆ ಕೇಳಿದ್ದು ಚಾಸಾ 1 ರವರು ಆರೋಪಿಗಳು ಕಲ್ಲಿನಿಂದ ನನ್ನ ಮುಖವನ್ನು ಜಜ್ಜಿದ್ದು ನನ್ನ ಎರಡು ಹಲ್ಲು ಮುರಿದಿರುತ್ತದೆ , ಕುತ್ತಿಗೆ ಹಿಸುಕಿದರು ಹಾಗೂ ನನ್ನ ಬಟ್ಟೆಯನ್ನು ಹರಿದು ನನ್ನ ಮಾನ ಹೋಗುವ ರೀತಿ ನಡೆದುಕೊಂಡಿರುತ್ತಾರೆ. ನ್ಯಾ.ದ ಮುಂದಿರುವ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಹಲ್ಲು ಮತ್ತು ಕಲ್ಲನ್ನು ನೋಡಿದರೆ ನನಗೆ ಈಗ ಗುರುತಿಸಲಾಗುವುದಿಲ್ಲ ಏಕೆಂದರೆ ಆ ಕಾಲಕ್ಕೆ ಅಲ್ಲಿ ಇರಲಿಲ್ಲ. ಸಾಕ್ಷಿ ಮುಂದುವರೆದು ಮಹಜರ್ ಕಾಲಕ್ಕೆ ಹೋಗಿದ್ದು ಆ ಸ್ಥಳದಲ್ಲಿ 02 ಹಲ್ಲುಗಳು ಮತ್ತು ಕಲ್ಲು ಇದ್ದದನ್ನು ನೋಡಿರುತ್ತೇನೆ. ಪೋ.ರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.

ನ್ಯಾ.ದ ಮುಂದಿರುವ 02 ಹಲ್ಲುಗಳು ಮತ್ತು ಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದು 02 ಹಲ್ಲುಗಳನ್ನು ಎಂ ಒ 1 ಎಂದು, ಮತ್ತು ಕಲ್ಲನ್ನು ಎಂ ಒ 2 ಎಂದು ಗುರುತಿಸಲಾಯಿತು. ಈ ವಿಚಾರವಾಗಿ ನಾನು ಪೋ.ರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ** ಆರೋಪಿಗಳ ಪರ ವಕೀಲರು **ಶ್ರೀ. ಬಿ ಎಸ್ .ಆರ್.**ರವರಿಂದ.

ನಾನು ಎಂ ಎ. ಬಿ ಹೆಡ್ ಮಾಡಿರುತ್ತೇನೆ. ಜಮೀನಿನ ವ್ಯಾಜ್ಯ 08 ವರ್ಷಗಳಿಂದ ಇದೆ. ಸರ್ವೆ ನಂ. 130/3 ರ ಆರೋಪಿಗಳ ಜಮೀನಿನ ಸ್ವಾದೀನಕ್ಕೆ ನಾನು ಮತ್ತು ಚಾಸಾ 1 ಅಡಚಣೆ ನೀಡುತ್ತಿರುವುದಾಗಿ ಆರೋಪಿಗಳು ಅ ದಾ 272/15 ರಲ್ಲಿ ದಾವೆ ಹಾಕಿದ್ದರು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ಕೇಸಿನಲ್ಲಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ಆಗಿತ್ತು ಎಂದರೆ ಸರಿ. ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶವಿದ್ದರು ಚಾಸಾ 1 ಆ ಜಮೀನಿಗೆ ಆರೋಪಿಗಳ ಸ್ವಾದೀನಕ್ಕೆ ತೊಂದರೆ ನೀಡಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 130/3 ರ ಜಮೀನಿನ ಆರ್ ಟಿ ಸಿ 1ನೇ ಆರೋಪಿ ಹೆಸರಿನಲ್ಲಿದೆ. ಸದರಿ ಜಾಗವು ನಮಗೆ ಬರಬೇಕೆಂದು ಹೇಳುತ್ತಿರುತ್ತೀರಿ ಎಂದರೆ ಸಾಕ್ಷಿ 1-17 ಗುಂಟೆ ಪೈವು ನಮಗೆ 19 ಗುಂಟೆ ಬರಬೇಕೆಂದು ಹೇಳುತ್ತಾರೆ. ಸದರಿ 19 ಗುಂಟೆ ಜಾಗವು ನಮ್ಮ ತಾಯಿ ಹೆಸರಿಗೆ ಕ್ರಯವಾಗಿರುತ್ತದೆ. ಪೋಲೀಸರಿಗೆ ತನಿಖಾ ಕಾಲಕ್ಕೆ ಕ್ರಯ ಪತ್ರ ನೀಡಿರುತ್ತೇನೆ. ಆದರೆ ಆ ಬಗ್ಗೆ ಹೇಳಿಕೆ ನೀಡಿಲ್ಲ. ಸರ್ವೆ ನಂ. 130/3 ರ ಜಮೀನು ನನ್ನ ತಾಯಿ ಹೆಸರಿಗೆ ಕ್ರಯ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರೇ ಆರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅವರ ಸ್ವಾದೀನಕ್ಕೆ ತೊಂದರೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಕೆಲಸದಿಂದ ಬಂದಾಗ ಚಾಸಾ 1 ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿದ್ದರು. ಚಾಸಾ 1 ರವರಿಗೆ ಮಾನ ಹೋಗುವ ಹಾಗೆ ಆರೋಪಿಗಳು ನಡೆದು ಕೊಂಡಿರುತ್ತಾರೆಂದು ನಾನು ಪೋ.ರಿಗೆ ಹೇಳಿಕೆ ನೀಡಿರುತ್ತೇನೆ. ಘಟನೆ ಬಗ್ಗೆ ನನ್ನ ತಾಯಿ ನನಗೆ ಅವರು ದಾಖಲಾಗಿದ್ದ

ಆಸ್ಪತ್ರೆಯಲ್ಲಿ ಹೇಳಿರುತ್ತಾರೆ. ಆಸ್ಪತ್ರೆಗೆ ಪೋಲೀಸರು ಅದೇ ದಿನ ಬಂದಿರುತ್ತಾರೆ. ಆಗಲೂ ಸಹಾ ಚಾಸಾ 1 ಹೇಳಿಕೆ ನೀಡಿದರು ಮತ್ತು ಸಹಿ ಸಹಾ ಮಾಡಿದ್ದರು. ಆರೋಪಿತರು ಕಲ್ಲಿನಿಂದ ಬಾಯಿಗೆ ಹೊಡೆದಿರುತ್ತಾರೆ. ಆ ಕಾಲಕ್ಕೆ ಚಾಸಾ 1 ರವರ ಕೆಳ ತುಟಿ ಮತ್ತು ಬಾಯಿಗೆ ಪೆಟ್ಟಾಗಿತ್ತು. ಮತ್ತು ಈ ವಿಚಾರವನ್ನು ಹೇಳಿಕೆಯಲ್ಲಿ ಹೇಳಿರುತ್ತೇನೆ. ಈಗ ನನ್ನ ತಾಯಿಗೆ 67 ವರ್ಷ. ನನ್ನ ತಾಯಿ ಎಲೆ ಅಡಿಕೆ ತಿನ್ನುತ್ತಾರೆ. ಚಾಸಾ 1 ರವರಿಗೆ ಘಟನೆ ಆಗಿದೆ ಎಂದು ಹೇಳುತ್ತಿರುವ ಮುಂಚಿತವೇ ಎಲೆ ಅಡಿಕೆ ಹೊಗೆಸೊಪ್ಪು ತಿಂದು ಮುರಿದು ಹೋಗಿತ್ತು ಎಂದರೆ ಸರಿಯಲ್ಲ. ಘಟನೆಯಿಂದ ಚಾಸಾ 1 ರವರ ಮತ್ತೇರೆಡು ಹಲ್ಲು ಅಲ್ಲಾಡುತ್ತಿರಲಿಲ್ಲ ಹಾಗು ಆರೋಪಿತರು ಚಾಸಾ 1 ರವರ ಬಾಯಿಗೆ ಹೊಡೆದಿಲ್ಲ , ಕುತ್ತಿಗೆ ಹಿಸುಕಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ತುಟಿಗೆ ಪೆಟ್ಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಕಲ್ಲಿನಲ್ಲಿ ಹೊಡೆದರೆ ಪೂರ್ತಿ ಬಾಯಿಗೆ ಮತ್ತು ಎರಡು ತುಟಿಗಳಿಗೆ ಪೆಟ್ಟಾಗಬೇಕು ಎಂದರೆ ಸಾಕ್ಷಿಯು ಈ ರೀತಿ ಪೆಟ್ಟಾಗಿದೆ ಎಂದು ನುಡಿಯುತ್ತಾರೆ. ಸಿವಿಲ್ ವ್ಯಾಜ್ಯವನ್ನು ಆರೋಪಿತರು ರಾಜಿ ಮಾಡಿಕೊಳ್ಳಬೇಕೆಂದು ನಾನು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 2 ರವರ ಮನೆಗೆ ಚಾಸಾ 1 ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಾಸಾ 1 ರವರು ಎಲ್ಲರ ಮನೆಗೆ ಕೆಲಸಕ್ಕೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 2 ರವರ ಮನೆಗೆ ಚಾಸಾ 1 ಖಾಯಂ ಆಗಿ ಕೆಲಸಕ್ಕೆ ಹೋಗುತ್ತಿದ್ದು ಚಾಸಾ 2 ರವರಿಂದ ಆಗಾಗ ಹಣವನ್ನು ಚಾಸಾ 1 ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ 1ನೇ ಆರೋಪಿ ಹೆಸರಿಗೆ ಜಮೀನು ನೊಂದಣಿ ಆಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತಾವದಿಯಲ್ಲಿ ಹಣ ಪಡೆದು 1ನೇ ಆರೋಪಿ ಹೆಸರಿಗೆ ಜಮೀನು ನೊಂದಣಿ ಆಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾವು ಅಣ್ಣಯ್ಯ ರವರಿಗೆ ಮೂರುಸಾವಿರ ರೂ ಹಣ ನೀಡಿ ಅವರಿಂದ ನಾವು ಕ್ರಯಪತ್ರ ಮಾಡಿಸಿಕೊಂಡಿರುತ್ತೇನೆಂದು ಹೇಳಿಕೆ ನೀಡಿರುತ್ತೇನೆ. ಸದರಿ ರೀತಿ ನಾವು 1ನೇ ಆರೋಪಿಗೆ ಯಾವ ಹಣ ನೀಡಿಲ್ಲ ಮತ್ತು ಕ್ರಯಪತ್ರ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 1ನೇ

ಆರೋಪಿ ನಮ್ಮ ಗಮನಕ್ಕೆ ಬಾರದ ಹಾಗೆ 1 ಎಕರೆ 20 ಗುಂಟೆ ಜಾಗವನ್ನು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ. ನಾನು ಸದರಿ ಜಮೀನಿನ ದಾಖಲಾತಿಗಳನ್ನು ಪರಿಶೀಲಿಸಿದ್ದು 1ನೇ ಆರೋಪಿ ಅತನ ಹೇಸರಿಗೆ ಪೂರ್ತಿ 1-20 ಗುಂಟೆ ಜಾಗ ಖಾತೆ ಮಾಡಿಸಿಕೊಂಡಿರುವುದು ತಿಳಿದಿರುತ್ತದೆ ಆದರೆ ಯಾವ ಅದಾರದ ಮೇಲೆ ಮಾಡಿಸಿಕೊಂಡಿದ್ದರು ಎಂದು ತಿಳಿದಿಲ್ಲ. 1ನೇ ಆರೋಪಿ ಮತ್ತು ಆತನ ಸಹೋದರನಾದ ಬೊಮ್ಮಯ್ಯ ಚಾಸಾ 1 ರವರಿಗೆ ಯಾವುದೇ ಕ್ರಯ ಪತ್ರ ಮಾಡಿಲ್ಲ ಆದರೆ 1ನೇ ಆರೋಪಿಯ ಸಹೋದರನಾದ ಬೊಮ್ಮಯ್ಯ ರವರಿಂದ 1ನೇ ಆರೋಪಿಗೆ ಆ ಸ್ವತ್ತು ಕ್ರಯ ವಾಗಿದ್ದರಿಂದ 1ನೇ ಆರೋಪಿ ಹೆಸರಿಗೆ ಆ ಜಮೀನಿನ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. ಗಲಾಟೆಯಾದ ದಿನ ಮ. 3 ಗಂಟೆ ಸುಮಾರಿಗೆ ಆ ಸ್ಥಳದ ಬಳಿ ಹೋಗಿರುತ್ತೇನೆ. ಮ. 12-30 ರಲ್ಲಿ ನನಗೆ ವಿಚಾರ ತಿಳಿದಾಗ ಚಾಸಾ 1 ಆಸ್ಪತ್ರೆಯಲ್ಲಿರುವುದಾಗಿ ತಿಳಿಯಿತು. ನಂತರದಲ್ಲಿ ನಾನು ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಬಂದು ಹೆಚ್ಚಿನ ಚಿಕಿತ್ಸೆಗೆ ಹಾಸನದ ಆಸ್ಪತ್ರೆಗೆ ಸಂಜೆ 5 - 6 ಗಂಟೆಗೆ ಕರೆದುಕೊಂಡು ಹೋಗಿರುತ್ತೇನೆ. ದೂರನ್ನು ದಿಃ 20.05.18 ರಂದು ನೀಡಿರುತ್ತಾರೆ. ನಾನು ಚಾಸಾ 1 ರವರನ್ನು ಅರಕಲಗೂಡು ಆಸ್ಪತ್ರೆಗೆ ನೋಡಲು ಬಂದ ಸಮಯಕ್ಕೆ ಚಾಸಾ 1 ದೂರು ನೀಡಿದ್ದರು. ಎಂ ಒ 1 ನನ್ನ ತಾಯಿಯ ಹಲ್ಲುಗಳಲ್ಲ , ಎಂ ಒ 2 ರಿಂದ ಆರೋಪಿತರು ಆ ದಿನ ಹೊಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ಹಲ್ಲೆ ಮಾಡಿಲ್ಲ , ಚಾಸಾ 1 ರವರೇ ಆರೋಪಿತರ ಜಮೀನಿನ ಸ್ವಾದೀನಕ್ಕೆ ಹೋಗಿ ಅಡಚಣೆ ಮಾಡಿರುತ್ತಾರೆ ಮತ್ತು ಆರೋಪಿತರು ಚಾಸಾ 1 ರವರ ವಿರುದ್ದ ದೂರು ನೀಡಿ ಪ್ರಕರಣ ದಾಖಲಾದ ನಂತರ ಉದ್ದೇಶ ಪೂರ್ವಕವಾಗಿ ಚಾಸಾ 1 ಈ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಘಟನೆಯಾದ ಬಗ್ಗೆ ಏನು ತಿಳಿದಿಲ್ಲ ಆದರೂ ಚಾಸಾ 1 ರವರು ನೀಡಿದ ಸುಳ್ಳು ಮಾಹಿತಿ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ದಿನ ಚಾಸಾ 1 ರವರಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**